ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಭಾರತೀಯ ಮಾನಕ ಬ್ಯೂರೋ IS / ISO 9001 : 2008
BUREAU OF INDIAN STANDARDS QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./MD/ED-I/2015-16/36

ದಿನಾಂಕ :
Date 27.07.2015

**CIRCULAR No. 914**

Sub : Interest subsidy scheme for SC/ST Entrepreneurs – (a) enhancement of term loan limit from ₹2.00 crore to ₹5.00 crore and (b) extension in repayment period from 5 to 8 years.
Ref: Circular No.908 dated 11.06.2010

-:o:0:o:-

The Government of Karnataka vide its GO No.ಸಕಇ 201 ಎಸ್‌ಎಲ್‌ಪಿ 2015, ಬೆಂಗಳೂರು, ದಿನಾಂಕ 21-07-2015 has enhanced the term loan limit for availing interest subsidy under the scheme from ₹2.00 crore to ₹5.00 crore and extended the repayment period from five to eight years. A copy of the GO is enclosed to this Circular for ready reference. The GO has come into effect from 01.04.2015. Hence, the term loans sanctioned on or after 01.04.2015 upto ₹5.00 crore can be covered under the scheme. With regard to extending repayment period upto eight years excluding moratorium period and whether the extension of repayment period can be considered for existing loans, a clarification is sought from the Social Welfare Department, GoK.

All other terms and conditions mentioned in GO dated 22.05.2010 circulated vide Circular No.908 dated 11.06.2010 remains unaltered. The contents of this circular shall be brought to the notice of all the concerned in your office / department.

Encl: As above.

CHAIRMAN AND
MANAGING DIRECTOR

To:
All BMs / AGMs / DGMs of Branches
All IA cells
All Department Heads in HO
All General Managers
Library

cc: Executive Directors - for information

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಅವಧಿ ಸಾಲದ ಮೊತ್ತವನ್ನು ಹೆಚ್ಚಿಸುವ ಹಾಗೂ ಸಾಲ ಮರುಪಾವತಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಕಇ 76 ಎಸ್‌ಎಲ್‌ಪಿ 2008, ದಿನಾಂಕ: 22-05-2010

2) ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 13-03-2015ರಂದು ವಿಧಾನಮಂಡಲದಲ್ಲಿ ಮಂಡಿಸಿದ ಆಯವ್ಯಯ ಭಾಷಣ ಕಂಡಿಕೆ 199ರಂತೆ

3) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ದಿನಾಂಕ: 01-04-2015

*****

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 22-05-2010ರ ಸರ್ಕಾರದ ಆದೇಶದಲ್ಲಿ ಪರಿಶಿಷ್ಟ ಜಾತಿಯ/ಪಂಗಡದ ಉದ್ಯಮಶೀಲರಿಗೆ ಶೇಕಡ 4ರ ಬಡ್ಡಿದರದಲ್ಲಿ ನೀಡಲು ಸಾಲದ ಮೊತ್ತಕ್ಕೆ ಕೆಳಕಂಡಂತೆ ಗರಿಷ್ಟ ಮಿತಿಯನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

> "The Karnataka State Finance Corporation is at liberty to consider any amount of project cost. However the interest subsidy is restricted to Rs. 2.00 Crores of the loan. If the loan amount is more than Rs. 2.00 Crores, then the full interest amount of the balance loan beyond Rs. 2.00Crores is required to be borne by the entrepreneurs."

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ: 13-03-2015ರಂದು ವಿಧಾನ ಮಂಡಲದಲ್ಲಿ ಮಂಡಿಸಿದ ಆಯವ್ಯಯ ಭಾಷಣ ಕಂಡಿಕೆ 199ರನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮುಖಾಂತರ ಹಾಲಿ ಇರುವ ಬಡ್ಡಿ ದರದ ರಿಯಾಯಿತಿಯಲ್ಲಿ ಅವಧಿ ಸಾಲ ಮೊತ್ತವನ್ನು ರೂ. 2.00 ಕೋಟಿಗಳಿಂದ ರೂ. 5.00ಕೋಟಿಗಳಿಗೆ ಹೆಚ್ಚಿಸಲಾಗುವುದು ಹಾಗೂ ಸಾಲ ಮರು ಪಾವತಿ ಅವಧಿಯನ್ನು 5 ವರ್ಷಗಳಿಂದ 8 ವರ್ಷಕ್ಕೆ ವಿಸ್ತರಿಸಲಾಗುವುದು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರುತ್ತಾರೆ.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ದಿನಾಂಕ: 01-04-2015ರ ಪ್ರಸ್ತಾವನೆಯಲ್ಲಿ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ರವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಹಾಲಿ ಇರುವ ಬಡ್ಡಿ ದರದ ರಿಯಾಯಿತಿಯಲ್ಲಿ ಅವಧಿ ಸಾಲ ಮೊತ್ತವನ್ನು ರೂ. 2.00 ಕೋಟಿಗಳಿಂದ ರೂ. 5.00 ಕೋಟಿಗಳಿಗೆ ಹೆಚ್ಚಿಸುವ ಹಾಗೂ ಸಾಲ ಮರು ಪಾವತಿ ಅವಧಿಯನ್ನು 5 ವರ್ಷಗಳಿಂದ 8 ವರ್ಷಗಳಿಗೆ ವಿಸ್ತರಿಸುವ ಬಗ್ಗೆ ಸೂಕ್ತ ಸರ್ಕಾರಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

-----2

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಕಇ 201 ಎಸ್‌ಎಲ್‌ಪಿ 2015, ಬೆಂಗಳೂರು, ದಿನಾಂಕ:21-07-2015</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2015-16ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಹಾಲಿ ಇರುವ ಬಡ್ಡಿದರದ ರಿಯಾಯಿತಿಯಲ್ಲಿ ಅವಧಿ ಸಾಲ ಮೊತ್ತವನ್ನು ರೂ. 2.00 ಕೋಟಿಗಳಿಂದ ರೂ. 5.00 ಕೋಟಿಗಳಿಗೆ ಹೆಚ್ಚಿಸಲಾಗಿದ್ದು ಹಾಗೂ ಸಾಲ ಮರು ಪಾವತಿ ಅವಧಿಯನ್ನು (ಮಾರ್ಟೋರಿಯಂ ಅವಧಿಯನ್ನು ಹೊರತುಪಡಿಸಿ) 5 ವರ್ಷಗಳಿಂದ 8 ವರ್ಷಗಳ ವರೆಗೆ ವಿಸ್ತರಿಸಲು ಈ ಕೆಳಕಂಡ ಷರತ್ತಿಗಳಿಗೆ ಒಳಪಟ್ಟು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

1) ಈ ಆದೇಶ 2015-16ನೇ ಸಾಲಿನಿಂದ (01.04.2015 ರಿಂದ) ಜಾರಿಗೆ ಬರುತ್ತದೆ. ಈ ಯೋಜನೆಗೆ ತಗಲುವ ವೆಚ್ಚವನ್ನು 2015-16ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ವಿವಿಧ ಅಭಿವೃದ್ಧಿ ಯೋಜನೆ/ಕಾರ್ಯಕ್ರಮಕ್ಕಾಗಿ (Various Development Schemes/ Programmes for SCs/STs ) ಲೆಕ್ಕಶೀರ್ಷಿಕೆ 2225-01-800-0-19(SC) ಮತ್ತು 2225-02-800-0-06(ST)ರಡಿ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಭರಿಸತಕ್ಕದ್ದು.

2) ಉಳಿದಂತೆ, ಸರ್ಕಾರದ ಆದೇಶ ಸಂಖ್ಯೆ: ಸಕಇ 76 ಎಸ್‌ಎಲ್‌ಪಿ 2008, ದಿನಾಂಕ: [illegible].05.2010ರಲ್ಲಿ ನೀಡಿರುವ ಷರತ್ತುಗಳು ಅನ್ವಯಿಸುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ (ವೆಚ್ಚ 3 & 9)ರವರ ಟಿಪ್ಪಣಿ ಸಂಖ್ಯೆ: ಆಇ 557 ವೆಚ್ಚ-3/2015, ದಿನಾಂಕ: 25-06-2015ರಲ್ಲಿ ನೀಡಿರುವ ಸಹಮತಿಯೊಂದಿಗೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

21/7/2015
(ಗಿರಿಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

<u>ಗೆ:-</u>

1) ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಇಲಾಖೆ, ನಂ. 1/1, ಕೆ.ಎಸ್.ಎಫ್.ಸಿ. ಭವನ, ತಿಮ್ಮಯ್ಯ ರಸ್ತೆ, ಬೆಂಗಳೂರು-52.
4) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು
5) ಉಪ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು

-------3